


### ರೋಚಕ ಚಾರಣ

'ಹಿಮನದಿ ಚಾರಣ' ಆರ್. ವಿಶ್ವನಾಥ್ ಅವರ ಮುಖಪುಟ ಲೇಖನ ರೋಚಕವಾಗಿ, ಕೌತುಕಮಯವಾಗಿ ಓದಿಸಿಕೊಂಡು ಹೋಯಿತು. ಚಿತ್ರಗಳು ಲೇಖನದ ಮೆರುಗನ್ನು ಹೆಚ್ಚಿಸಿದವು.

-ನೆ.ಲ.ರಾಂ, ಬೆಂಗಳೂರು/ ಕೊಹಿಮ, ಬಸರಕೋಡು

### ಥ್ರಿಲ್ಲಿಂಗ್ ಅನುಭವ

ನಾನೊಬ್ಬ ಕನ್ನಡಿಗ, ಪಾಲಕ್ಕಾಡ್‌ನಲ್ಲಿದ್ದೇನೆ. 'ಸುಧಾ' ಓದುಗ. ಫ್ಯಾಕ್ಟರಿಯಿಂದ ರಾತ್ರಿ 12 ಗಂಟೆಗೆ ಮನೆಗೆ ಬಂದರೆ ಸೆಕ್ಯುರಿಟಿ ಗಾರ್ಡ್ 'ಸುಧಾ' ನೀಡುತ್ತಾನೆ. ಸ್ನಾನ ಮಾಡಿ ಸಣ್ಣ ಓದಿಗೆ ಕುಳಿತುಕೊಳ್ಳುತ್ತೇನೆ. ನಿಜಕ್ಕೂ ಆಹ್ಲಾದಕರ, ಫ್ರೆಶ್ ಲೇಖನಗಳು! ನಾನೊಬ್ಬ ದಕ್ಷಿಣ ಭಾರತ ಮಟ್ಟದ ಟ್ರೆಕ್ಕರ್ ಕೂಡಾ. 'ಹಿಮನದಿ ಚಾರಣ' ಓದಿ ಆನಂದಗೊಂಡೆ. ನಿಜಕ್ಕೂ ಅದೊಂದು ಹೊಸ ಥ್ರಿಲ್ಲಿಂಗ್ ಅನುಭವ.

-ಎಸ್. ವೀರೇಶ್, ಪಾಲಕ್ಕಾಡ್

### ಮಡಿ ಹೆಸರಿನಲ್ಲಿ ಅಂಧಾನುಕರಣೆ ಬೇಕಿಲ್ಲ

'ಮಡಿ'ಯ ಬಗೆಗಿನ ವೈಚಾರಿ(ಕ) ವಿಶ್ಲೇಷಣೆ ಮನ ತಟ್ಟುವಂತಿತ್ತು. ಆರೋಗ್ಯ ಹಾಗೂ ಶುಚಿತ್ವದ ದೃಷ್ಟಿಯಿಂದ 'ಮಡಿ' ಎಂಬ ಕಟ್ಟುಪಾಡನ್ನು ಹಿರಿಯರು ಅನುಸರಿಸಿಕೊಂಡು ಬಂದಿರುವುದು ಸರಿಯಾಗಿದ್ದರೂ, ಕೇವಲ ಅಂಧಾನುಕರಣೆಯೇ ಮಾರ್ಗದರ್ಶಿಯಾಗಬಾರದು.

-ಎ.ಕೆ. ಪಟ್ಟಾಭಿ, ಬೆಂಗಳೂರು

### ಪೂಜಾ ಮಡಿ ವಿವರ ಬೇಕಿತ್ತು

'ಮಡಿ' ಬರಹದಲ್ಲಿ 'ಪುರುಡು' ಮತ್ತು 'ಸೂತಕ'ಗಳ ಬಗ್ಗೆ ಮಾತ್ರ ತಿಳಿಸಲಾಗಿದೆ. ಪೂಜಾ ಸಮಯದಲ್ಲಿ ಆಚರಿಸಲಾಗುವ 'ಮಡಿ' ಬಗ್ಗೆ ಏನೂ ತಿಳಿಸಿಲ್ಲ.

-ಕೆ. ಪ್ರಕಾಶ್, ಚಿಕ್ಕಜೋಗಿಹಳ್ಳಿ

### ಕಲಾಕೃತಿ ಬಗ್ಗೆ ಬೆಳಕು

ಎಸ್ಕೆಚ್ ಚಿತ್ರಲೇಖನ ಸಾಗರದಾಳದ ಕಲಾಕೃತಿಗಳ ಬಗ್ಗೆ ಬೆಳಕು ಚೆಲ್ಲಿದೆ.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಮಹಿಳೆಗೆ ಮಾರ್ಗದರ್ಶಿ

ಮಹಿಳೆಯರು ಕಾರ್ಪೊರೇಟ್ ಜಗತ್ತಿಗೆ ಕಾಲಿಡುತ್ತಿರುವಂತೆಯೇ ಅವಳ ಆರ್ಥಿಕ ಮಟ್ಟವೂ ಮೇಲೇರತೊಡಗಿದೆ. ಹಾಗಾಗಿ ಯು.ಪಿ. ಪುರಾಣಿಕ್ ಅವರ 'ಷೇರುಪೇಟೆ ಮತ್ತು ಮಹಿಳೆ' ಲೇಖನ ತುಂಬಾ ಸಹಕಾರಿಯಾಗಿದೆ. ಫಾರ್ವರ್ಡ್ ಕಾಂಟ್ರಾಕ್ಟ್ ವಹಿವಾಟು ಮಾಡುವಾಗ ಸ್ಟಾಪ್ ಲಾಸ್ ಇಲ್ಲದೇ ವ್ಯವಹರಿಸುವುದು ಅಪಾಯಕಾರಿ. ಇಲ್ಲದಿದ್ದರೆ ಮಾರ್ಜಿನ್ ಹಣವೂ ಖೋತಾ ಆಗುತ್ತದೆ. ಈ ಬಗ್ಗೆಯೂ ಲೇಖಕರು ತಿಳಿಸಿಕೊಡಬೇಕಿತ್ತು.

-ಲೀಲಾವತಿ. ಎಂ.ಎಸ್., ಬೆಂಗಳೂರು

### ಬೀದಿ ನಾಟಕಗಳ ಮಹತ್ವ

ಬೀದಿ ನಾಟಕಗಳೆಂದರೆ ನಗಾಡುತ್ತಿದ್ದೆವು. ಆದರೆ ಅದರ ಮಹತ್ವ ಹಾಗೂ ಬಾದಲ್ ಸರ್ಕಾರ್ ಅದಕ್ಕೊಂದು ಮಹತ್ವ ನೀಡಿದ್ದನ್ನು ಗುಡಿಹಳ್ಳಿ ನಾಗರಾಜ ಅವರು ಸ್ವಾರಸ್ಯಕರವಾಗಿ ಬರೆದಿದ್ದಾರೆ.

-ಬಿ.ಎಸ್.ಮುಳ್ಳೂರ, ಹಲಗತ್ತಿ/ ಎಚ್.ಎನ್.ವಿಶ್ವನಾಥ, ಶಿವಮೊಗ್ಗ

### ನೀವು ಕೇಳಿದಿರಿ? ಪುಸ್ತಕ ಮಾಡಿ

ಮಡಿವಂತಿಕೆಯ ಸಮಾಜದಲ್ಲಿ ಯೌವನಕ್ಕೆ ಬಂದ ಹುಡುಗ ಹುಡುಗಿಯರು ಕೆಲವು ವಿಷಯಗಳನ್ನು ಹಿರಿಯರನ್ನು ಕೇಳದಿರುವುದು ಅಂತಹ ಆಶ್ಚರ್ಯವೇನೂ ಅಲ್ಲ. ಆ ನಿಟ್ಟಿನಲ್ಲಿ ನೆಚ್ಚಿನ 'ಸುಧಾ' ವಾರಪತ್ರಿಕೆಯು 'ಸುಖೀಭವ'ದ ಮುಖಾಂತರ ಮಾಡುತ್ತಿರುವ ಕಾರ್ಯ ಶ್ಲಾಘನೀಯ. ಈಗ ಇದನ್ನು ಪುಸ್ತಕ ರೂಪದಲ್ಲಿ ಹೊರತರುತ್ತಿರುವುದು ಮೆಚ್ಚಬೇಕಾದ ಸಂಗತಿಯೇ. ಇದರ ತರಹವೇ 'ನೀವು ಕೇಳಿದಿರಿ?' ಮಾಲಿಕೆಯಲ್ಲಿ ಇಲ್ಲಿಯವರೆಗೆ ಬಂದ ಎಲ್ಲಾ ಬಹುಮಾನಿತ ಪ್ರಶ್ನೆಗಳನ್ನೂ ಸೇರಿಸಿ ಒಂದು ಕಿರುಹೊತ್ತಿಗೆಯನ್ನು ಮಾಡಿದರೆ ಮತ್ತೂ ಸಂತೋಷವಾಗುವುದರಲ್ಲಿ ಎರಡು ಮಾತಿಲ್ಲ.

-ಪಿ.ಎನ್. ಶ್ರೀವತ್ಸ, ಬೆಂಗಳೂರು

### ರಾಜ ನೆಲ್ಲಿಕಾಯಿ ರುಚಿ

ಈ ನೆಲ್ಲಿಕಾಯಿಯ ಗೊಂಚಲುಗಳನ್ನು ನೋಡುವುದೇ ಚೆಂದ! ಇದಕ್ಕೆ ಕಿರುನೆಲ್ಲಿಕಾಯಿ ಎಂಬ ಹೆಸರೂ ಇದೆ. ಇದನ್ನು ಬಳಸಿ ಚಿತ್ರಾನ್ನವೂ ಸಾಧ್ಯ. ಉ.ಕ., ದ.ಕ. ಜಿಲ್ಲೆಗಳಲ್ಲಿ ಇವುಗಳು ಉದ್ದನೆಯ ಆಕಾರದಲ್ಲಿ ಬೆಳೆಯುತ್ತವೆ.

-ಟಿ.ಎನ್. ಸರಸ್ವತಿ, ತಿಪಟೂರು

### ಚಿತ್ರರಂಗ ಎಚ್ಚೆತ್ತುಕೊಳ್ಳಲಿ

ರಾಷ್ಟ್ರಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಮೂರು ಕನ್ನಡ ಚಿತ್ರಗಳ ಕುರಿತ ರಘುನಾಥ ಚ.ಹ. ಬರಹ ಚೆನ್ನಾಗಿದೆ. ರಿಮೇಕ್ ಹಾಗೂ ಡಬ್ಬಿಂಗ್ ಲೋಕದಲ್ಲಿ ಮುಳುಗಿ ದುಡ್ಡು ಮಾಡುವುದೇ ಪ್ರಮುಖವಾಗಿರುವವರು ಇದರಿಂದ ಎಚ್ಚೆತ್ತುಕೊಳ್ಳಲಿ.

-ಕಾಳೀಹುಂಡಿ ಶಿವಕುಮಾರ್, ಮೈಸೂರು/ ಕಾಡನೂರು ರಾಮಶೇಷ, ಹುಲಿಮಂಗಲ

### ಯಶಸ್ಸಿಗೆ ದಾರಿ

ವಸಂತ ಹೊಸಬೆಟ್ಟು ಬರಹ 'ಯಶಸ್ಸಿನ ದಾರಿಯಲ್ಲಿ ನಡೆದರೆ...' ಒಳ್ಳೆಯ ಮಾರ್ಗದರ್ಶಿಯಾಗಿದೆ.

-ಮೊಳಕಾಲ್ಮುರು ಸುರೇಶ, ಬಳ್ಳಾರಿ

### ಗೊತ್ತು ಗುರಿಯಿಲ್ಲದವರ ಪ್ರತಿನಿಧಿ

ವಿಚಾರ ಲಹರಿಯ ವೈನತೇಯರ ಬರಹ 'ತೊಂಡಲೆಯುವ ಚಾಪಲ್ಯ'ವು ಗೊತ್ತು ಗುರಿಯಿಲ್ಲದೆ ಜೀವನ ನಡೆಸುತ್ತಿರುವ ಲಕ್ಷಾಂತರ ಮಂದಿಯನ್ನು ಪ್ರತಿನಿಧಿಸುವಂತಿದೆ. ನಿರಂತರ ಅಭ್ಯಾಸ ಎನ್ನುವುದು ಎಲ್ಲದಕ್ಕೂ ಪಥ್ಯ ಎನ್ನುವುದು ನೂರಕ್ಕೆ ನೂರು ಸತ್ಯ. ಗೀತೆಯಲ್ಲಿ ಇದನ್ನು 'ಅಭ್ಯಾಸಯೋಗ'ಎಂದು ಕರೆಯಲಾಗಿದೆ.

-ತ.ನಂ.ಶಾರದಾ, ತುಮಕೂರು




ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974

ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.